# ಸಮಾರಂಭ ನಂತರದ ಪತ್ರಿಕಾ ಪ್ರಕಟಣೆ

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ದಿನಾಂಕ: 07.11.2020ರಂದು ಬೆಳಗ್ಗೆ 11.00 ಗಂಟೆಗೆ ಚರ್ಚ್ ಸ್ಟ್ರೀಟ್‌ನಲ್ಲಿ ಸ್ವಚ್ಛ ವಾಯು ಸ್ಟ್ರೀಟ್ ಉಪಕ್ರಮವನ್ನು ಉದ್ಘಾಟಿಸಿರುತ್ತಾರೆ. ಈ ಕಾರ್ಯಕ್ರಮದಲ್ಲಿ 8 ಸಣ್ಣ ಮತ್ತು ಮಧ್ಯಮ ಉದ್ಯಮಗಳು ಭಾಗವಹಿಸಿದ್ದವು. ಮಾನ್ಯ ಮುಖ್ಯಮಂತ್ರಿಯವರು ಟೆಸ್ಟ್‌ಬೆಡ್ ನಲ್ಲಿ ಭಾಗವಹಿಸಿದ್ದ ಸಣ್ಣ ಮತ್ತು ಮಧ್ಯಮ ಉದ್ಯಮಗಳೊಂದಿಗೆ ಸಂವಾದ ಮಾಡಿದರು. ನಂತರದಲ್ಲಿ ಸಮಾರಂಭದ ಸಭೆ ಉದ್ದೇಶಿಸಿ ಮಾತನಾಡುತ್ತಾ ಈ ರೀತಿ ಹೇಳಿದರು. "ಉಸಿರಾಡಲು ಶುದ್ಧ ವಾಯು ಈ ಭೂಮಂಡಳದ ಪ್ರತಿಯೊಬ್ಬ ನಿವಾಸಿಯ ಮೂಲಭೂತ ಹಕ್ಕು ಆಗಿರುತ್ತದೆ. ಕಾಲಾನುಕ್ರಮೇಣದಲ್ಲಿ ನಾವು ತೆಗೆದುಕೊಂಡಿರುವ ಹಲವು ಆಯ್ಕೆಗಳಿಂದಾಗಿ ಮಾನವಕುಲ ಮತ್ತು ಭೂಮಂಡಳದ ಭವಿಷ್ಯದ ಬಗ್ಗೆ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದ್ದೇವೆ. ಈಗ ವಿವೇಕಯುಕ್ತ ಆಯ್ಕೆಗಳನ್ನು ತೆಗೆದುಕೊಳ್ಳುವಂತಹ ಸಮಯ ಬಂದಿದೆ ಮತ್ತು ಈ ಜಾಗತಿಕ ಬಿಕ್ಕಟ್ಟನ್ನು ತಗ್ಗಿಸಲು ಕರ್ನಾಟಕವು ಕಾರ್ಯನಿರ್ವಹಿಸಲಿದೆ. ಚರ್ಚ್ ಸ್ಟ್ರೀಟ್‌ನಲ್ಲಿ ಹಮ್ಮಿಕೊಳ್ಳಲಾಗಿರುವ ಈ ಸ್ವಚ್ಛ ಉಪಕ್ರಮವು ಈ ಗುರಿಯತ್ತ ಒಂದು ಹೆಜ್ಜೆಯಾಗಿರುವುದನ್ನು ಗಮನಿಸಲು ಸಂತೋಷವಾಗುತ್ತದೆ".

ಈ ಸಂದರ್ಭದಲ್ಲಿ ಸನ್ಮಾನ್ಯ ನಗರಾಭಿವೃದ್ಧಿ ಸಚಿವರಾದ ಶ್ರೀ ಬಿ.ಎ ಬಸವರಾಜ ಬೈರತಿಯವರು ಹೀಗೆಂದರು "ಬೆಂಗಳೂರಿನ ಚರ್ಚ್ ಸ್ಟ್ರೀಟ್‌ನಲ್ಲಿ ಸ್ವಚ್ಛ ವಾಯು ಸ್ಟ್ರೀಟ್ ಟೆಸ್ಟ್‌ಬೆಡ್ ಉದ್ಘಾಟನೆಯಾಗಿರುವುದು ನನಗೆ ಅತ್ಯಂತ ಸಂತೋಷಕರವಾಗಿದೆ. ವಾರಾಂತ್ಯದ ದಿನಗಳಲ್ಲಿ ವಾಹನ ಮುಕ್ತ ಚರ್ಚ್ ಸ್ಟ್ರೀಟ್ ಅನ್ನು ಜನರು ಆನಂದಿಸುವರೆಂದು ಮತ್ತು ಈ ಉಪಕ್ರಮ ಜಾರಿಯಿಂದ ವ್ಯಾಪಾರೋದ್ಯಮಕ್ಕೆ ಪ್ರಯೋಜನಕಾರಿಯಾಗಲಿದೆ ಎಂಬ ದೃಢ ನಂಬಿಕೆ ನನಗೆ ಇದೆ. ಚರ್ಚ್ ಸ್ಟ್ರೀಟ್‌ನ ಈ ಅನುಭವದೊಂದಿಗೆ ಇತರೆ ಟೈರ್-II ನಗರಗಳಲ್ಲಿ ಇಂತಹುದೇ ಉಪಕ್ರಮಗಳನ್ನು ಕೈಗೊಳ್ಳಲಾಗುವುದೆಂಬ ಭರವಸೆ ಇದೆ".

ಲಾರ್ಡ್ ಅಹಮದ್ ಆಫ್ ವಿಂಬಲ್ಡನ್‌ನ, ಸೌತ್ ಏಷಿಯಾ ಕಾಮನ್‌ವೆಲ್ತ್ ರಾಜ್ಯ ಸಚಿವರು ವಿಡಿಯೋ ಸಂದೇಶದ ಮೂಲಕ ಹೀಗೆಂದರು "ಸ್ವಚ್ಛ ವಾಯು ಸ್ಟ್ರೀಟ್ ಉಪಕ್ರಮವು ಉದ್ಘಾಟನೆಯು ಭಾರತವು ಹವಾಮಾನ ವೈಪರೀತ್ಯದ

© 2020 Directorate of Urban Land Transport

ಬಗ್ಗೆ ತೆಗೆದುಕೊಂಡ ಮುಂದಡಿ ಹೆಜ್ಜೆಗೆ ಉದಾಹರಣೆಯಾಗಿದೆ ಮತ್ತು ನಾವು ಒಗ್ಗೂಡಿ ಕೆಲಸ ಮಾಡಿದಾಗ ಏನನ್ನು ಬೇಕಾದರೂ ಸಾಧಿಸಬಲ್ಲೆವು ಎಂಬುದನ್ನು ತೋರಿಸುತ್ತದೆ. COP 26ರ ಅಧ್ಯಕ್ಷತೆ ವಹಿಸಿರುವ ಯುನೈಟೆಡ್ ಕಿಂಗ್ ಡಮ್ ದೇಶವು ಎಲ್ಲಾ ದೇಶಗಳೊಂದಿಗೂ, ನಾಗರೀಕ ಸಮಾಜ, ವ್ಯಾಪಾರೋದ್ಯಮ ಮತ್ತು ವ್ಯಕ್ತಿಗಳೊಂದಿಗೆ ಜಂಟಿಯಾಗಿ ಪ್ರೇರೇಪಣೆ ಮೂಲಕ ನವೆಂಬರ್ 2021ರಲ್ಲಿ ನಡೆಯಲಿರುವ ಸಮ್ಮೇಳನಕ್ಕೂ ಮುಂಚೆ ಕಾರ್ಯನಿರ್ವಹಿಸಲು ಬದ್ಧವಾಗಿದೆ. ಈ ಕಷ್ಟಕರವಾದ ಸಮಯದಲ್ಲಿ ನಮ್ಮ ಪ್ರಸ್ತುತ ಸ್ಥಿತಿಯನ್ನು ಪುನರಾವಲೋಕಿಸಿ ಪುನರ್ ನಿರ್ಮಾಣ ಕಾರ್ಯವನ್ನು ಉತ್ತಮವಾಗಿ ಮಾಡಲು ನಮ್ಮ ಮುಂದಿನ ಪೀಳಿಗೆಗೆ ಋಣಿಯಾಗಿದ್ದೇವೆ".

ಶ್ರೀ ಎನ್.ಎ ಹ್ಯಾರಿಸ್, ಮಾನ್ಯ ಶಾಸಕರು, ಶಾಂತಿನಗರ ಮತಕ್ಷೇತ್ರ ಇವರು ಹೀಗೆಂದರು "ಬೆಂಗಳೂರಿನ ಅಪ್ರತಿಮ ಚರ್ಚ್ ಸ್ಟ್ರೀಟ್‌ನಲ್ಲಿ ಸ್ವಚ್ಛ ವಾಯು ಸ್ಟ್ರೀಟ್ ಒಂದು ವಿಶಿಷ್ಟ ಉಪಕ್ರಮವಾಗಿದೆ. ನಾವೆಲ್ಲರೂ ಕಾಲ್ನಡಿಗೆ, ಸೈಕಲ್ ಮತ್ತು ಸಾರ್ವಜನಿಕ ಸಾರಿಗೆಯನ್ನು ಹೆಚ್ಚಾಗಿ ಉಪಯೋಗಿಸಿದ್ದಲ್ಲಿ ವಾಯು ಗುಣಮಟ್ಟವನ್ನು ಉತ್ತಮ ಗೊಳಿಸಬಹುದು ಎಂದು ನನಗೆ ದೃಢ ನಂಬಿಕೆ ಇದೆ. ನಾನು ಪಾದಚಾರೀಕರಣಗೊಳಿಸಿರುವ ಚರ್ಚ್ ಸ್ಟ್ರೀಟ್‌ಗೆ ಬಂದು ಅನುಭವ ಪಡೆದುಕೊಳ್ಳಲು ಎಲ್ಲಾ ಜನರಲ್ಲೂ ಪ್ರೇರೇಪಿಸುತ್ತೇನೆ.

ವಿ. ಮಂಜುಲ, ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ ಇವರು "ಉದ್ದೇಶಿತ ಚಟುವಟಿಕೆಗಳಿಂದಾಗಿ ಮೋಟಾರು ವಾಹನ ಸಂಚಾರದ ಮಾಲಿನ್ಯವನ್ನು ಉಪಯುಕ್ತಕರವಾಗಿ ಕಡಿಮೆ ಮಾಡಲು, ನಾಗರಿಕರ ಜೀವನದ ಗುಣಮಟ್ಟವನ್ನು ಸುಧಾರಿಸಲು ಮತ್ತು ಸ್ಥಳೀಯ ವ್ಯವಹಾರಗಳಿಗೆ ಪ್ರಯೋಜನಕಾರಿಯಾಗಬಲ್ಲವು ಎಂಬುದನ್ನು ಸಾಬೀತುಪಡಿಸಲು ಇದು ಒಂದು ಅದ್ಭುತ ಅವಕಾಶವಾಗಿದೆ.

ಡಾ. ಆಶಿಶ್ ವರ್ಮಾ, ಸಹವರ್ತಿ ಪ್ರಾಧ್ಯಾಪಕರು, ಸಾರಿಗೆ ವ್ಯವಸ್ಥೆಗಳ ಇಂಜಿನಿಯರಿಂಗ್, ಭಾರತೀಯ ವಿಜ್ಞಾನ ಸಂಸ್ಥೆ (IISc), ಬೆಂಗಳೂರು ಇವರು "ಚರ್ಚ್ ಸ್ಟ್ರೀಟ್ ಪ್ರಾಯೋಗಿಕೆಯು ಒಂದು ಪ್ರಮುಖ ಜೀವಂತ ಪ್ರಯೋಗಾಲಯದ ಚಟುವಟಿಕೆಯಾಗಿದ್ದು, ಸ್ವಚ್ಛ ವಾಯು ಬೀದಿ ಕಾರ್ಯಕ್ರಮದಡಿ ಒಂದು ಬೀದಿಯಲ್ಲಿ ಪಾದಚಾರಿಕರಣವು ನೀಡುವ ಜನ

© 2020 Directorate of Urban Land Transport

ಜೀವನ ಗುಣಮಟ್ಟದಲ್ಲಿನ ಪರಿಣಾಮಗಳನ್ನು ಎತ್ತಿ ತೋರಿಸುತ್ತದೆ. ಭಾರತೀಯ ವಿಜ್ಞಾನ ಸಂಸ್ಥೆಯು ಈ ಒಂದು ಚಟುವಟಿಕೆಯಲ್ಲಿ ಸಂಶೋಧಕ ಪಾಲುದಾರನಾಗಿ ಭಾಗವಹಿಸಿ ಪರಿಣಾಮಗಳ ಮೌಲ್ಯಮಾಪನ ಕೈಗೊಂಡಿರುವುದು ಹರ್ಷದಾಯಕವಾಗಿದೆ.

ಎನರ್ಜಿ ಸಿಸ್ಟಮ್ಸ್ ಕ್ಯಾಟಪಲ್ಟ್ (ಇಎಸ್ಸಿ) ಯ ಕಾರ್ಯಕ್ರಮದ ಪ್ರಮುಖ ಆಂಡ್ರ್ಯೂ ಸ್ಟೋಕ್ಸ್, "ಯುಕೆ ಮತ್ತು ಭಾರತದಿಂದ ಅನೇಕ ಉತ್ತಮ ಹೊಸತನವನ್ನು ಪ್ರದರ್ಶಿಸಲು ಮತ್ತು ಬೆಂಗಳೂರಿನಲ್ಲಿ ಸುಸ್ಥಿರ ಚಲನಶೀಲತೆಗೆ ವ್ಯಾಪಕವಾದ ಆಂದೋಲನವನ್ನು ಬೆಂಬಲಿಸಲು ಬೆಂಗಳೂರಿನಲ್ಲಿರುವ ನಮ್ಮ ಪಾಲುದಾರರೊಂದಿಗೆ ಕೆಲಸ ಮಾಡುವುದು ಅದ್ಭುತವಾಗಿದೆ. ಇದು ಭಾರತದ ಇತರ ನಗರಗಳಲ್ಲಿ ಮತ್ತು ಜಾಗತಿಕವಾಗಿ ಪುನರಾವರ್ತಿಸಬಹುದಾದ ಸಹಕಾರಿ ಮಾದರಿಯನ್ನು ಪ್ರತಿನಿಧಿಸುತ್ತದೆ ಎಂದು ನಾವು ನಂಬುತ್ತೇವೆ "

ಕನೆಕ್ಟೆಡ್ ಪ್ಲೇಸ್ ಕ್ಯಾಟಪಲ್ಟ್ (ಸಿಪಿಸಿ) ಯ ಕಾರ್ಯಕ್ರಮದ ಪ್ರಮುಖ ಬಾಬ್ ಬುರ್ಗೋಯ್ನ್ ಅವರು "ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಮತ್ತು ಗಾಳಿಯ ಗುಣಮಟ್ಟವನ್ನು ಅಳೆಯಲು ಇವುಗಳ ಪರಿಹಾರಗಳು ಮಾಡಬಹುದಾದ ಕೊಡುಗೆಯನ್ನು ಪ್ರದರ್ಶಿಸುವಲ್ಲಿ ಅನೇಕ ನವೀನ ಯುಕೆ ಮತ್ತು ಭಾರತೀಯ ಸ್ಟಾರ್ಟ್ ಅಪ್ ಗಳನ್ನು ಬೆಂಬಲಿಸುತ್ತಿರುವುದಕ್ಕೆ ನಾವು ನಿಜವಾಗಿಯೂ ಉತ್ಸುಕರಾಗಿದ್ದೇವೆ. ಇದಲ್ಲದೇ ಗ್ರಾಹಕರಿಗೆ ಸ್ಪಷ್ಟ ಮೌಲ್ಯಗಳನ್ನು ನೀಡಿರುವುದು ಹರ್ಷದಾಯಕವಾಗಿದೆ.

ಚರ್ಚ್ ಸ್ಟ್ರೀಟ್ ಆಕ್ಯುಪೆಂಟ್ಸ್ ಅಸೋಸಿಯೇಶನ್‌ನ ಅಧ್ಯಕ್ಷರಾದ ಶ್ರೀ ದೀಪಕ್ ಬಟಾವಿಯಾ ಅವರು, ಹೀಗೆ ತಿಳಿಸಿದರು "ಚರ್ಚ್ ಸ್ಟ್ರೀಟ್‌ನಲ್ಲಿ ಹಲವಾರು ಉಪಯುಕ್ತ ಚಟುವಟಿಕೆಗಳನ್ನು ನಗರ ಭೂ ಸಾರಿಗೆ ನಿರ್ದೇಶನಾಲಯವು ತೆಗೆದುಕೊಂಡಿರುವುದಕ್ಕೆ ಮತ್ತು ಚರ್ಚ್ ಸ್ಟ್ರೀಟ್‌ನ್ನು ನಗರದಲ್ಲೇ ಮೊಟ್ಟ ಮೊದಲ ಸ್ವಚ್ಛ ವಾಯು ಬೀದಿಯಾಗಿ ಆಯ್ಕೆ ಮಾಡಿಕೊಂಡಿರುವುದು ಅತ್ಯಂತ ಸಂತೋಷಕರ ವಿಷಯವಾಗಿದೆ. ಚರ್ಚ್ ಸ್ಟ್ರೀಟ್‌ನ ಸುತ್ತಲಿನ ರೆಸ್ಟೋರೆಂಟ್‌ಗಳು ಮತ್ತು ಪಬ್‌ಗಳಿಗೆ ಇದು ಉತ್ತೇಜನ ನೀಡುತ್ತದೆ. ಚರ್ಚ್ ಸ್ಟ್ರೀಟ್‌ನ ನಿವಾಸಿಗಳಿಗೆ ಇನ್ನೂ ಉತ್ತಮವಾದ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದಲ್ಲಿ ಪ್ರತಿಯೊಬ್ಬರಿಗೂ ಅತ್ಯಂತ ಪ್ರಯೋಜನಕರವಾಗಲಿದೆ"

© 2020 Directorate of Urban Land Transport

ಶ್ರೀ ಸತ್ಯ ಶಂಕರನ್, ಬೆಂಗಳೂರು ಬೈಸಿಕಲ್ ಮೇಯರ್ ಈ ಕಾರ್ಯಚಟುವಟಿಕೆಯಲ್ಲಿ ತೊಡಗಿಸಿಕೊಂಡವರು ಈ ರೀತಿ ಹೇಳಿದರು "ವಿಶ್ವದ ನಗರಗಳಲ್ಲೆಡೆಯೂ ಕಾರು ಮುಕ್ತ ಅನುಭವಕ್ಕಾಗಿ ಬೀದಿಗಳನ್ನು ತೆರವುಗೊಳಿಸುವುದನ್ನು ಆರಂಭಿಸಿರುತ್ತಾರೆ. ಸ್ವಚ್ಛ ವಾಯುವನ್ನು ಮರಳಿ ತರಲು ಇರುವ ಏಕೈಕ ಮಾರ್ಗವೆಂದರೆ ಮೋಟಾರುರಹಿತ ಬೀದಿಗಳನ್ನು ಕೇಂದ್ರೀಕರಿಸಿ ಅಭಿವೃದ್ಧಿಪಡಿಸುವುದೇ ಆಗಿರುತ್ತದೆ. ಸ್ವಚ್ಛ ವಾಯು ಬೀದಿ ಚಟುವಟಿಕೆಯು ಬೆಂಗಳೂರನ್ನು ವಿಶ್ವ ಭೂಪಟದಲ್ಲಿ ಇರಿಸಲಿದೆ ಎಂಬ ಹೇಳಿಕೆ ನೀಡಲು ಚರ್ಚ್ ಸ್ಟ್ರೀಟ್‌ಗಿಂತ ಉತ್ತಮವಾದ ಸ್ಥಳ ಇನ್ನಾವುದು ಇರಲಿಕ್ಕಿಲ್ಲ".

© 2020 Directorate of Urban Land Transport